# ಮಕ್ಕಳ ಕಲಿಕೆ ಮತ್ತು ಸಾಮಾಜಿಕ ಸಂದರ್ಭ

ಸುನಿಲ್ ಸಾಹ

ಶಿಕ್ಷಣವು ಮಕ್ಕಳನ್ನು ಸದೃಢರನ್ನಾಗಿಸುವ ಹಾಗೂ ಸಂವೇದನಾಶೀಲ ಮನುಷ್ಯರನ್ನಾಗಿ ಮಾಡುವ, ಆ ಮೂಲಕ ಅರ್ಥಪೂರ್ಣ ಬದುಕು ಸಾಗಿಸಲು ನೆರವಾಗುವ ಪ್ರಕ್ರಿಯೆಯಾಗಿದೆ. ಅವರು ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸಬೇಕಿದ್ದು, ಜಾಗತಿಕವಾಗಿ ಧನಾತ್ಮಕ ಬದಲಾವಣೆಯನ್ನು ತರುವಲ್ಲಿ ತಮ್ಮ ಪಾತ್ರವನ್ನು ರೂಪಿಸಬೇಕಿದೆ. ಆದ್ದರಿಂದ ಪ್ರತಿಯೊಬ್ಬ ಶಿಕ್ಷಕರೂ ತಮ್ಮ ತರಗತಿಯಲ್ಲಿರುವ ಮಗು ಒಬ್ಬ ವ್ಯಕ್ತಿಯಾಗಿರುವುದರ ಜೊತೆಗೇ, ಅವನು/ಅವಳು ಸಮಾಜದ ಒಂದು ಭಾಗವೂ ಆಗಿರುತ್ತಾರೆ ಮತ್ತು ಅದಕ್ಕನುಗುಣವಾಗಿ ಬೆಳೆಯಬೇಕು ಎನ್ನುವ ಸಂಗತಿಯನ್ನು ತಿಳಿದಿರಬೇಕು.

ನಾನು ಶಾಲೆಗಳಿಗೆ ಹೋದಾಗ ಮತ್ತು ಸಹಶಿಕ್ಷಕರನ್ನು ಭೇಟಿಯಾದಾಗಲೆಲ್ಲ ಕಲಿಯಲಾರದ 'ಕೆಲವು' ಮಕ್ಕಳು ಇದ್ದಾರೆ ಎನ್ನುವ ಒಂದು ಸಂಗತಿ ಕೊರೆಯುತ್ತಲೇ ಇರುತ್ತದೆ. ಇದಕ್ಕೆ ಕಾರಣಗಳನ್ನು ಹುಡುಕುತ್ತ ಹೋದಾಗ, ಕಂಡುಬರುವ ಪ್ರತಿಕ್ರಿಯೆಗಳಲ್ಲಿ ವಾಸ್ತವವಾಗಿ ಈ ಮಕ್ಕಳೂ ಮನುಷ್ಯರು ಎಂಬುದನ್ನು ನಿರಾಕರಿಸಿದಂತೆ ಕಾಣಿಸುತ್ತದೆ. ಮಗುವು ಈ ವಾಸ್ತವ ಸಮಾಜದ ಒಂದು ಭಾಗವಾಗಿದ್ದು, ಇಲ್ಲಿಯೇ ಸಂವಹನ ನಡೆಸುವ, ಬೌದ್ಧಿಕವಾಗಿ ಮತ್ತು ಸಾಮಾಜಿಕವಾಗಿ ಬೆಳವಣಿಗೆ ಹೊಂದುತ್ತದೆ. ಹಾಗಿದ್ದಾಗ ಕೆಲವು ಮಕ್ಕಳು ಕಲಿಯುವ ಸಾಮರ್ಥ್ಯವನ್ನು ಹೊಂದಿಲ್ಲ ಎನ್ನಲು ಹೇಗೆ ಸಾಧ್ಯ?

ಮಕ್ಕಳ ಕಲಿಕೆಗೆ ಸಂಬಂಧಿಸಿದಂತೆ ಇರುವ ನಂಬಿಕೆಗಳನ್ನು ನೋಡಿದಾಗ, ನಮ್ಮ ಸಾಮಾಜಿಕ ವ್ಯವಸ್ಥೆಯೇ ಅದಕ್ಕೆ ಕಾರಣ ಎನ್ನುವುದು ಕಂಡುಬರುತ್ತದೆ. ನಮ್ಮ ಸಮಾಜವು ವಿವಿಧ ಜಾತಿ, ಧರ್ಮ ಮತ್ತು ಆರ್ಥಿಕ ಹಿನ್ನೆಲೆಗಳನ್ನು ಒಳಗೊಂಡ ಒಂದು ನಿರ್ದಿಷ್ಟ ರೀತಿಯ ಸಂರಚನೆಯನ್ನು ಹೊಂದಿದ್ದು, ಇದರ ಆಧಾರದ ಮೇಲೆ, ಮಕ್ಕಳು ಶಾಲೆಗೆ ದಾಖಲಾತಿ ಪಡೆದ ಕ್ಷಣದಿಂದಲೇ ಅವರ ಕಲಿಕೆಯ ಸಾಮರ್ಥ್ಯವನ್ನು ನಿರ್ಧರಿಸಿಬಿಡಲಾಗುತ್ತದೆ. ಈ ನಂಬಿಕೆಯು ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಇನ್ನಷ್ಟು ಆಳವಾಗಿ ಬೇರೂರಿದಾಗ, ಬೋಧನೆ ಮತ್ತು ಕಲಿಕೆಯ ಮೇಲಿನ ಗಮನವು ತೆಳುವಾಗಿ, ಮಕ್ಕಳ ಸಾಮಾಜೋ–ಆರ್ಥಿಕ ಸ್ಥಿತಿಗತಿಗಳ ಮೇಲೆ ಗಮನವು ವರ್ಗಾವಣೆಗೊಳ್ಳುತ್ತದೆ. ಇದರಿಂದ ನಮ್ಮ ಪ್ರಯತ್ನಗಳು ಕುಗ್ಗುತ್ತವೆ.

ಮಕ್ಕಳ ವಿಚಾರಕ್ಕೆ ಬಂದರೆ, ನಾವು ಅವರನ್ನು ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಅತ್ಯಂತ ತಳಮಟ್ಟದಲ್ಲಿ ಇಡುತ್ತೇವೆ, ಬಹುಶಃ ಮಹಿಳೆಯರಿಗಿಂತಲೂ ಕೆಳಗಿನ ಸ್ಥಾನದಲ್ಲಿ ಅವರನ್ನು ಇರಿಸುತ್ತೇವೆ ಎನ್ನುವುದು ನನ್ನ ಅನುಭವದಿಂದ ಹೇಳಬಹುದಾದ ಮಾತು. ನಾವು ಶಾಲೆಯಲ್ಲಿ ಆಗಾಗ, 'ಈ ಮಗು ಏನನ್ನೂ ಮಾಡಲಾರದು, ಅದಕ್ಕೆ ಸಾಮರ್ಥ್ಯವಿಲ್ಲ,' ಅಥವಾ 'ಅದು ಹೀಗೆಲ್ಲ ಕಲಿಯುವುದಿಲ್ಲ, ಸರಿಯಾಗಿ ಏಟು ಕೊಡಬೇಕು,' ಮುಂತಾದ ಮಾತುಗಳನ್ನು ಕೇಳುತ್ತೇವೆ. ನಮ್ಮ ಮಕ್ಕಳು ಇತರ ಮಕ್ಕಳಿಗಿಂತ ಹೆಚ್ಚು ಅಂಕಗಳನ್ನು ಪಡೆಯಬೇಕು ಎನ್ನುವ ಸಮಾಜದಲ್ಲಿರುವ ನಿರೀಕ್ಷೆ, ಈ ರೀತಿಯ ಹೋಲಿಕೆ ಮತ್ತು ಮೂದಲಿಕೆಗಳು ಉಸಿರುಗಟ್ಟಿಸುವ ವಾತಾವರಣವನ್ನು ನಿರ್ಮಿಸುತ್ತವೆ ಹಾಗೂ ಅದಕ್ಕೆ ಹಲವಾರು ಜೀವಗಳು ಬಲಿಯಾಗುತ್ತವೆ. ಇಂತಹ ಒಂದು ಪರಿಸರದಲ್ಲಿ, ನಾವು ಬೋಧಿಸಲು ಮತ್ತು ಕಲಿಯಲು ಮುಂದಾಗುವುದಿಲ್ಲ. ಮಕ್ಕಳು, ಮಾನವ ಸಮಾಜದ ಪ್ರಮುಖ ಅಂಗವಾಗಿದ್ದು, ವಯಸ್ಕರಲ್ಲಿರುವ ಎಲ್ಲಾ ಮಾನವ ಸಹಜ ಗುಣಗಳನ್ನು ಅವರೂ ಹೊಂದಿದ್ದಾರೆ. ಅಂದಾಗ, ಕೆಲವು ಮಕ್ಕಳು ಕಲಿಯಲಾರರು ಎನ್ನುವುದು ಯಾಕೆ?

ಆರ್ಥಿಕ ಅಸಮಾನತೆಯು ಈ ಅಂತರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇಂದಿಗೂ ಕೂಡ ನಮ್ಮ ಸಮಾಜದ ದೊಡ್ಡದೊಂದು ಭಾಗಕ್ಕೆ ಎರಡು ಹೊತ್ತು ಊಟವೂ ಸಿಗದ ಸ್ಥಿತಿ ಇದೆ ಮತ್ತು ಕೆಲವು ಕುಟುಂಬಗಳಲ್ಲಿ ಅದಕ್ಕಾಗಿ ಬಹಳ ಒದ್ದಾಡಬೇಕಾದ ಪರಿಸ್ಥಿತಿಯಿದೆ. ಇಂತಹ ಕುಟುಂಬಗಳಿಂದ ಬಂದ ಮಕ್ಕಳು ಕುಟುಂಬದ ಕಾಳಜಿಯನ್ನು ವಹಿಸುವುದು ತಮ್ಮ ಜವಾಬ್ದಾರಿ ಎಂದು ಭಾವಿಸಿ, ಅದಕ್ಕಾಗಿ ಕೆಲಸ ಮಾಡಲು ಆರಂಭಿಸುತ್ತಾರೆ. ಸುಗ್ಗಿಯ ಸಮಯದಲ್ಲಿ ಅನೇಕ ಮಕ್ಕಳು ತಮ್ಮ ಕುಟುಂಬಕ್ಕೆ ನೆರವಾಗಲು ಶಾಲೆಗೆ ಗೈರು ಹಾಜರಾಗಿ ಭತ್ತದ ಕೊಯ್ಲು, ಕಾಳು ಕೀಳುವುದು ಮತ್ತು ಆಲೂಗಡ್ಡೆ ಅಗೆಯುವಂತಹ ಕಾಯಕಗಳಲ್ಲಿ ತೊಡಗುತ್ತಾರೆ.

ಈ ಸಂದರ್ಭದಲ್ಲಿ ನಾನು ಒಂದು ಘಟನೆಯನ್ನು ಹಂಚಿಕೊಳ್ಳಲು ಬಯಸುತ್ತೇನೆ. ನಮ್ಮಲ್ಲಿ ಕೆಲವರು ಉತ್ತರಾಖಂಡ್‌ನಲ್ಲಿರುವ ಶಾಲೆಯೊಂದಕ್ಕೆ ಬಾಲ ಶೋಧ ಮೇಳದ (Baal Shodh Mela) ತಯಾರಿಗಾಗಿ ನಿಯಮಿತವಾಗಿ ಹೋಗುತ್ತಿದ್ದೆವು. ಅಲ್ಲಿ ಸಮುದಾಯದ ಸದಸ್ಯರನ್ನು ಭೇಟಿಯಾಗುತ್ತಿದ್ದೆವು. ಆಗಾಗ ಅವರ ಜೊತೆ ಸಂವಾದ ನಡೆಸುತ್ತಿದ್ದೆವು. ನಮ್ಮ ಮೇಲಿದ್ದ ಅವರ ನಂಬಿಕೆ ಇನ್ನಷ್ಟು ದೃಢವಾಯಿತು. ಹೀಗೆ ತಮ್ಮನ್ನು ಭೇಟಿಯಾಗಲು, ತಮ್ಮ ಬದುಕು, ವೃತ್ತಿ ಬಗ್ಗೆ ಮಾತನಾಡಲು ಇದೇ ಮೊದಲ ಬಾರಿಗೆ ಕೆಲವರು ಬರುತ್ತಿದ್ದಾರೆಂದು ನಮಗೆ ಹೇಳಿದರು. ಈ ಸಮುದಾಯದ ಬಹುತೇಕ ಸದಸ್ಯರು ಜೀವನೋಪಾಯಕ್ಕಾಗಿ ಭಿಕ್ಷಾಟನೆಯನ್ನು ಅವಲಂಬಿಸಿದ್ದಾರೆ. ಸಾಮಾನ್ಯವಾಗಿ ಜನರು ವಯಸ್ಕರಿಗೆ ಹಣವನ್ನು ಕೊಡಲು ಇಷ್ಟಪಡುವುದಿಲ್ಲ. ಹಾಗಾಗಿ, ತಮ್ಮ ಇಷ್ಟಕ್ಕೆ ವಿರುದ್ಧವಾದರೂ ಮಕ್ಕಳನ್ನು ಜೊತೆಗೆ ಕೊಂಡೊಯ್ಯುವುದಾಗಿ ಅವರು ಹೇಳಿದರು. ತಮಗೆ ಶಿಕ್ಷಣದ ಮಹತ್ವವು ತಿಳಿದಿದೆಯೆಂದೂ ಅವರು ಹೇಳಿದರು.

'ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿದಿರದ ಸಮಾಜದ ಯಾವ ಭಾಗವೂ ಇಲ್ಲ. ಹಾಗಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರಲು ಇನ್ನೇನಾದರೂ ನಿಜವಾದ ನಿರ್ಬಂಧ ಇರಲೇಬೇಕು' ಎಂದು 1936ರಲ್ಲಿ ಪ್ರೇಮ್‌ಚಂದ್ ಅವರು ಬರೆದಿದ್ದರು. ಹಾಗೆ ಹೇಳುವುದರ ಮೂಲಕ ಮಕ್ಕಳು ಶಾಲೆಗೆ ಬಾರದಿರುವುದನ್ನು ನಾನು ಸಮರ್ಥಿಸುತ್ತಿಲ್ಲ. ನಾನು ಅದನ್ನು ಸಂವೇದನಾಪೂರ್ಣ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಅಷ್ಟೇ. ಇಂತಹ ಮಕ್ಕಳ ವಿಷಯದಲ್ಲಿ ನಾವು ಬೇರೊಂದು ಪ್ರಕ್ರಿಯೆಯನ್ನು ಪಾಲಿಸಬಹುದಾದ ಯಾವುದಾದರೂ ಮಾರ್ಗವಿದೆಯೇ? ಮಕ್ಕಳು

ಶಾಲೆಯನ್ನು ತಮ್ಮದೇ ಎಂದು ಭಾವಿಸುವ ಹಾಗೆ ನಾವು ಏನನ್ನಾದರೂ ಮಾಡಬೇಕಿದೆ. ಅವರ ಕುಟುಂಬ ಹಾಗೂ ಸಮುದಾಯಗಳು ಬದುಕುವುದಕ್ಕಾಗಿ ಹಣ ಗಳಿಸಲು ಹಿಡಿದ ಮಾರ್ಗವನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ ಹಾಗೂ ಗೌರವಿಸಬೇಕಿದೆ. ಕೆಲವು ಪ್ರಕ್ರಿಯೆಗಳನ್ನು ತರಗತಿ ಕೊಠಡಿಯ ಹೊರಗೆ ಕೈಗೆತ್ತಿಕೊಳ್ಳಬೇಕಾಗಬಹುದು. ಆದರೆ ನಾವದನ್ನು ತರಗತಿ ಕೊಠಡಿಯ ಪ್ರಕ್ರಿಯೆಯ ಭಾಗವನ್ನಾಗಿಸಬೇಕು ಮತ್ತು ಬೋಧನೆಗೆ ಸಂಬಂಧಿಸಿದಂತೆ ಹೊಸ ಉಪಕ್ರಮಗಳನ್ನು ನಾವು ಆರಂಭಿಸಬಹುದು.

ನಮ್ಮ ಕೆಲವೊಂದು ನಂಬಿಕೆಗಳನ್ನು ಬದಲಾಯಿಸಿಕೊಳ್ಳುವ ಅಗತ್ಯವಿದೆ ಜೊತೆಗೆ ಹೊಸ ಮಾರ್ಗಗಳನ್ನು ಶೋಧಿಸುವ ಅವಶ್ಯಕತೆಯೂ ಇದೆ. ಉದಾಹರಣೆಗೆ,

- ಮೊಟ್ಟ ಮೊದಲನೆಯದಾಗಿ, ನಾವು ಮಕ್ಕಳನ್ನು ಇತರ ಮಕ್ಕಳೊಡನೆ ಹೋಲಿಸುವುದನ್ನು ನಿಲ್ಲಿಸಬೇಕು; ಅಥವಾ ಅವರ ಬಗ್ಗೆ ಅಭಿಪ್ರಾಯ ರೂಪಿಸಿಕೊಳ್ಳುವುದನ್ನು ಮತ್ತು ಅವರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯ ಆಧಾರದ ಮೇಲೆ ಅವರಿಗೆ ಹಣೆಪಟ್ಟಿ ಹಚ್ಚುವುದನ್ನು ನಿಲ್ಲಿಸಬೇಕು.

- ಎಲ್ಲರಿಗೂ ಸಮಾನ, ವೈವಿಧ್ಯಮಯ ಮತ್ತು ಉಲ್ಲಾಸದಾಯಕ ರೀತಿಯಲ್ಲಿ ಕಲಿಸಿದರೆ, ಪ್ರತಿ ಮಗುವಿನ ಹಿನ್ನೆಲೆ ಹೇಗೇ ಇದ್ದರೂ, ಒಂದೇ ತೆರನಾದ ಕಲಿಯುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಶಾಲೆಗಳು ಎಲ್ಲಾ ಮಕ್ಕಳನ್ನೂ ದಾಖಲಿಸಿಕೊಳ್ಳುವಂತೆ, ಅವರನ್ನು ತಮ್ಮ ವ್ಯವಸ್ಥೆಯ ಭಾಗವಾಗಿಸಿಕೊಳ್ಳುವಂತೆ ಹಾಗೂ ಹಳೆಯ ನಂಬಿಕೆಗಳನ್ನೆಲ್ಲ ಮುರಿದುಹಾಕುವಂತೆ ಪ್ರಯತ್ನಗಳನ್ನು ಮಾಡಬೇಕು. ಸೂಕ್ತವಾದ ಬೆಂಬಲ ಮತ್ತು ಗೌರವ ದೊರಕಿದರೆ ಮಕ್ಕಳು ಕಲಿಯುತ್ತಾರೆ ಎಂದು ನಾವು ನಂಬಬೇಕು.

- ಪ್ರಶ್ನೋತ್ತರಗಳನ್ನು ಉರುಹೊಡೆಯುವುದರ ಮೂಲಕ ಯಶಸ್ಸನ್ನು ಗಳಿಸುವ ವಿದ್ಯಾರ್ಥಿಗಳ ಸಂಖ್ಯೆಗಿಂತಲೂ ಈ ಪ್ರಕ್ರಿಯೆಗೆ ಹೆಚ್ಚಿನ ಗಮನವನ್ನು ನೀಡುವ ಅಗತ್ಯವಿದೆ. ಮಕ್ಕಳಲ್ಲಿ ಸೃಜನಶೀಲ ಆಲೋಚನೆಯನ್ನು ಬೆಳೆಸುವುದು ಹೆಚ್ಚು ಮುಖ್ಯವಾಗಿದೆ. ಹೀಗೆ ಮಾಡಲು, ಶಾಲೆಯಲ್ಲಿ ವಿವಿಧ ತರಹದ ಬೋಧನಾ ಚಟುವಟಿಕೆಗಳನ್ನು ಆರಂಭಿಸಬಹುದು. ಉದಾಹರಣೆಗೆ, ಹೀಗೆ ಮಾಡಲು ವಿಷಯವನ್ನು ಮಕ್ಕಳ ಪರಿಸರಕ್ಕೆ ಜೋಡಿಸುವುದು, ಸಮುದಾಯದ ಸದಸ್ಯರನ್ನು ತರಗತಿಗೆ ಆಹ್ವಾನಿಸಿ ಸಂವಾದ ನಡೆಸುವುದು ಇತ್ಯಾದಿ ತರಹದ ಬೋಧನಾ ಚಟುವಟಿಕೆಗಳನ್ನು ತರಗತಿಗಳಲ್ಲಿ ಆರಂಭಿಸಬಹುದು. ಮಕ್ಕಳು ಮತ್ತು ಕಲಿಕಾ ಪ್ರಕ್ರಿಯೆಗಳೆರಡನ್ನೂ ನಾವು ಪ್ರೋತ್ಸಾಹಿಸುವ ಅಗತ್ಯವಿದೆ. ಈ ಪ್ರಕ್ರಿಯೆಯು ಕೆಲವು ಕಾರಣಕ್ಕಾಗಿ ಹಿಂದೆ ಉಳಿದ ಮಕ್ಕಳ ಕಲಿಕೆಯ ಪ್ರಕ್ರಿಯೆಯನ್ನು ಹೆಚ್ಚಿಸಲು ನೆರವಾಗುವುದಷ್ಟೇ ಅಲ್ಲ, ಶಾಲೆಗೆ ಹಾಜರಾಗುವುದರಲ್ಲೂ ಅವರ ಉತ್ಸಾಹವನ್ನೂ ಉತ್ತೇಜಿಸುತ್ತದೆ ಎಂಬುದಾಗಿ ನಮ್ಮ ಕೆಲವು ಶಾಲೆಗಳ ಅನುಭವವು ಸೂಚಿಸುತ್ತದೆ. ಕ್ರೀಡೆಗಳಲ್ಲಿ ಕ್ರೀಡಾ ಮನೋಭಾವದಿಂದ ಪಾಲ್ಗೊಳ್ಳದೆ, ಸ್ಪರ್ಧಿಸಲು ಆರಂಭಿಸಿ, ಎದುರಾಳಿಗಳನ್ನು ಶತ್ರುಗಳಂತೆ ನೋಡತೊಡಗುತ್ತೇವೆ ಎನ್ನುವುದು ಅತ್ಯಂತ ದೊಡ್ಡ ನಿರಾಶೆಯ ಸಂಗತಿ. ಸಂತೋಷ, ಹಾಗೂ ಹುರುಪಿಗಾಗಿ ಆಟದಲ್ಲಿ ಭಾಗವಹಿಸಿದರೆ, ಆಟದ ಸ್ವರೂಪವೇ ಬದಲಾಗಿ ಹೋಗುತ್ತದೆ. ಆಟವು ಭ್ರಾತೃತ್ವವನ್ನು ಬೆಳೆಸಲು ಸಹಾಯ ಮಾಡುತ್ತದೆ ಹಾಗೂ ಸಾಮಾಜಿಕ ವಿಕೃತಿಗಳನ್ನು ಕುಗ್ಗಿಸುತ್ತದೆ. ಇದು ಜಾತಿ ಮತ್ತು ಲಿಂಗ ಸಂಕೋಲೆಗಳನ್ನೂ ದುರ್ಬಲಗೊಳಿಸುತ್ತದೆ.

- ಬೋಧನಾ ವೃತ್ತಿಯು ಉಳಿದೆಲ್ಲ ವೃತ್ತಿಗಳಿಗಿಂತ ಭಿನ್ನವಾದುದು ಎಂಬ ನಂಬಿಕೆ ನಮಗಿರಲೇಬೇಕು ಹಾಗೂ ಶಿಕ್ಷಕರು ಮಕ್ಕಳನ್ನು ಸಂವೇದನಾಪೂರ್ಣವಾಗಿ ನಡೆಸಿಕೊಳ್ಳಬೇಕು. ಶಿಕ್ಷಕ ವೃತ್ತಿಯು ಹೊಸ ಪೀಳಿಗೆಯೊಂದನ್ನು ತಯಾರು ಮಾಡುವ ಪ್ರಕ್ರಿಯೆಯಾಗಿದೆ ಮತ್ತು ಸಮುದಾಯವು ಆ ಪ್ರಕ್ರಿಯೆಯಲ್ಲಿ ನಂಬಿಕೆ ಹೊಂದಿರುವುದರಿಂದಲೇ ಮಕ್ಕಳನ್ನು ಶಾಲೆಗೆ ಕಳುಹಿಸುತ್ತದೆ ಹಾಗೂ ಮುಂದಿನ ತಲೆಮಾರು ಇಂದು ಇರುವ ಸ್ಥಿತಿಯಿಂದ ಮುಂದಕ್ಕೆ ಚಲಿಸುತ್ತದೆ ಎಂದು ಭಾವಿಸುತ್ತದೆ.

ಆದ್ದರಿಂದ, ಇಂತಹ ಅಗಾಧ ಹೊಣೆಯನ್ನು ನಾವೆಲ್ಲರೂ ಹೊಂದಿದ್ದರೆ, ಸಹಜವಾಗಿಯೇ ನಮ್ಮ ಕೆಲಸದ ವ್ಯಾಪ್ತಿಯೂ ಅಷ್ಟೇ ದೊಡ್ಡದಾಗಿರುತ್ತದೆ. ಅದಕ್ಕಾಗಿ, ನಮ್ಮ ಏಳ್ಗೆಗಾಗಿ ನಾವೆಲ್ಲ ಒಟ್ಟಾಗಿ ಕೆಲಸ ಮಾಡುವುದನ್ನು ಮುಂದುವರೆಸಬೇಕು. ಆಗಷ್ಟೇ ನಾವು ಒಂದು ಸೂಕ್ಷ್ಮ, ವಿಚಾರಶೀಲ ಹಾಗೂ ಚಿಂತನಶೀಲ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ.



**ಸುನಿಲ್ ಸಾಹ** ಅವರು ೨೦೦೯ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿದ್ದು, ಮೊದಲು ಉತ್ತರಾಖಂಡ್ ಮತ್ತು ಈಗ ಛತ್ತೀಸ್‌ಗಢದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅದಕ್ಕೂ ಮೊದಲು ಅವರು ಹರಿಯಾಣದ ರಾಜ್ಯ ಸಂಪನ್ಮೂಲ ಕೇಂದ್ರದಲ್ಲಿ (ಸ್ಟೇಟ್ ರಿಸೋರ್ಸ್ ಸೆಂಟರ್, ಹರಿಯಾಣ) ಕಾರ್ಯನಿರ್ವಹಿಸುತ್ತಿದ್ದರು. ಅವರನ್ನು sunil@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** । ಪರಿಶೀಲನೆ: **ಲತಾ ಕೆ ಸಿ**